ಘನವಾದ್ಯ ಘಟಂ ನುಡಿಸಾಣಿಕೆಯಲ್ಲಿ ಹೆಸರುವಾಸಿಯಾಗಿರುವ ಗಿರಿಧರ ಉಡುಪ, ಅಮೆರಿಕ ವಾಯುಪಡೆಯ ಉತ್ಕೃಷ್ಟ ಸಂಗೀತಗಾರರೊಂದಿಗೆ ಸೇರಿ 'ಓಪನ್ ಕ್ಲಸ್ಟರ್ಸ್' ಎಂಬ ವಿಶಿಷ್ಟ ಆಲ್ಬಂ ಒಂದನ್ನು ಹೊರತಂದಿದ್ದಾರೆ. ಇದು ಜಾಗತಿಕ ಮಟ್ಟದಲ್ಲಿ ಸಂಗೀತಪ್ರಿಯರ ಮೆಚ್ಚುಗೆ ಗಳಿಸಿದೆ. ಈ ಹಿನ್ನೆಲೆ ಜೊತೆಗೆ ಲಯವಾದ್ಯದಲ್ಲಿ ತಮ್ಮ ಸಾಧನೆ, ಪರಿಶ್ರಮದ ಬಗ್ಗೆ ಅವರು 'ಸುಧಾ'ದೊಂದಿಗೆ ತಮ್ಮ ಅನುಭವ ಹಂಚಿಕೊಂಡಿದ್ದಾರೆ.

■ **ಉಮಾ ಅನಂತ್**



## ಬಹುಮುಖ ಪ್ರತಿಭೆ

ಕುಂದಾಪುರ ಸಮೀಪದ ಉಳ್ಳೂರು ಗಿರಿಧರ ಉಡುಪ ಘನವಾದ್ಯ ಘಟಂ ಅನ್ನು ನುಡಿಸಿ ವಿಶ್ವದಾದ್ಯಂತ ಲಯತರಂಗದ ಅಲೆಯನ್ನು ಅನುರಣಿಸಿದವರು. ದೇಶ ವಿದೇಶಗಳಲ್ಲಿ ಹಲವಾರು ಸೋಲೊ ಕಛೇರಿ, ಬಾಲಮುರಳಿಕೃಷ್ಣ, ಆರ್.ಕೆ. ಶ್ರೀಕಂಠನ್, ಟಿ.ಎನ್. ಕೃಷ್ಣನ್, ಉಮಯಾಳಪುರಂ ಶಿವರಾಮನ್, ಪಾಲ್ಘಾಟ್ ರಘು ಮುಂತಾದ ನುರಿತ ಕಲಾವಿದರಿಗೆ ಘಟಂ ಪಕ್ಕವಾದ್ಯ ನೀಡಿದ್ದಲ್ಲದೆ ಹಿಂದೂಸ್ತಾನಿ ಸಂಗೀತ ದಿಗ್ಗಜರಾದ ಹರಿಪ್ರಸಾದ್ ಚೌರಾಸಿಯ, ಅಮ್ಜದ್ ಅಲಿಖಾನ್, ಬಿರ್ಜು ಮಹಾರಾಜ್, ವಿಶ್ವಮೋಹನ್ ಭಟ್, ಜಸರಾಜ್ ಮುಂತಾದವರ ಕಛೇರಿಗಳಿಗೆ ಘಟಂ ನುಡಿಸಿ ಮೆಚ್ಚುಗೆ ಪಡೆದುಕೊಂಡವರು. ಕರ್ನಾಟಕ ಶಾಸ್ತ್ರೀಯ ಸಂಗೀತ ಮಾತ್ರವಲ್ಲದೆ ಹಿಂದೂಸ್ತಾನಿ ಸಂಗೀತ, ಫ್ಯೂಷನ್ ಬಗ್ಗೆಯೂ ಒಲವು ಉಳ್ಳವರು.

ಇವರ 'ಲಯತರಂಗ' ತಂಡ ದೇಶ ವಿದೇಶಗಳಲ್ಲಿ ಕಛೇರಿ ನೀಡಿದೆ. ಇವರು ಸ್ಥಾಪಿಸಿದ 'ಉಡುಪ ಫೌಂಡೇಷನ್' ಸಂಸ್ಥೆಯ ವತಿಯಿಂದ ಪ್ರತೀವರ್ಷ ಸರಣಿ ಸಂಗೀತ ಕಛೇರಿ ಆಯೋಜಿಸುತ್ತಾ ಬಂದಿದ್ದಾರೆ. ಇವರಿಗೆ 2020ರಲ್ಲಿ 'ಗಾನಕಲಾಶ್ರೀ, ಉಸ್ತಾದ್ ಬಿಸ್ಮಿಲ್ಲಾಖಾನ್ ರಾಷ್ಟ್ರೀಯ ಯುವ ಪುರಸ್ಕಾರದಂತಹ ಮನ್ನಣೆಯೂ ಲಭಿಸಿದೆ.

ಇದನ್ನು ನುಡಿಸಲು ತಾಳ್ಮೆ, ಶಕ್ತಿ, ದೈಹಿಕ ಸಾಮರ್ಥ್ಯ ಹೆಚ್ಚಿರಬೇಕು. ಈಗ ಹಲವಾರು ಕಲಾವಿದರು ಘಟಂ ನುಡಿಸಲು ಕಲಿತು ವೇದಿಕೆಗಳಲ್ಲೂ ನುಡಿಸುತ್ತಿದ್ದಾರೆ. ನಾನೂ ಮೊದಲು ಘಟಂ ಕಲಿಸುತ್ತಿರಲಿಲ್ಲ. ಈಗ ಕಲಿಸಲು ಶುರು ಮಾಡಿದ್ದೇನೆ. ಆಸ್ಟ್ರೇಲಿಯಾ, ದಕ್ಷಿಣ ಅಮೆರಿಕ ಸೇರಿದಂತೆ ದೇಶ ವಿದೇಶಗಳಲ್ಲೂ ಶಿಷ್ಯರಿದ್ದಾರೆ.

◆ **ನಿಮಗೆ ಅನುಕರಣೀಯ, ಆದರ್ಶ ಎನಿಸಿದ ಕಲಾವಿದರು ಯಾರು?**

ನಿಸ್ಸಂಶಯವಾಗಿ ನನ್ನ ತಂದೆ. ಅವರ ನುಡಿಸಾಣಿಕೆ, ಅವರ ಸರಳ ಜೀವನ, ಕಲೆಯನ್ನು ತಮ್ಮ ಜೀವನಕ್ಕೆ ಅಳವಡಿಸಿದ ರೀತಿ ಅನುಕರಣೀಯ. ಅವರೇ ನನ್ನ ಮೊದಲ ಗುರು. ಪಿಟೀಲು ವಾದಕರಾದ ಮೈಸೂರು ನಾಗರಾಜ್ – ಮಂಜುನಾಥ್ ಅವರು ನನಗೆ ಎಂದೆಂದಿಗೂ ಆತ್ಮೀಯರು, ಅವರಿಂದಲೇ ನನ್ನ ಕಲಾ ಜೀವನಕ್ಕೊಂದು ಮಹತ್ವದ ತಿರುವು ಕೂಡ ಸಿಕ್ಕಿತ್ತು. ಅದು ನವೆಂಬರ್ 24, 2001. ಸುಮಾರು 20 ವರ್ಷಗಳ ಹಿಂದೆ. ಶಿವಮೊಗ್ಗದಲ್ಲಿ ಅನನ್ಯ ಸಂಸ್ಥೆ ಆಯೋಜಿಸಿದ ಕಛೇರಿ. ಅಲ್ಲಿ ಮೈಸೂರು ಸಹೋದರರ ಪಿಟೀಲು ಕಛೇರಿಗೆ ನಾನು ಮೊದಲ ಬಾರಿಗೆ ಘಟಂ ನುಡಿಸಿದೆ. ಅರ್ಜುನ್‌ಕುಮಾರ್ ಮೃದಂಗದಲ್ಲಿದ್ದರು. ಈ ಕಛೇರಿ ಎಂದೂ ಮರೆಯಲಾಗದ್ದು. ಈ ಸಂಭ್ರಮವನ್ನು ಈ ವರ್ಷ ಆಚರಿಸಬೇಕು ಎಂದುಕೊಂಡಿರುವೆ. ಇವರ ಜೊತೆಗೆ ಕಲಾವಿದರಾದ ತ್ರಿಲೋಕ್ ಗುರ್ತು, ಶಿವಮಣಿ. ಉಮಯಾಳಪುರಂ ಶಿವರಾಮನ್, ಎಲ್. ಸುಬ್ರಮಣ್ಯನ್, ಡ್ರಮ್ ಶಿವಮಣಿ, ಕಾರೈಕುಡಿ ಮಣಿ, ಗಣೇಶ ಕುಮರೇಶ್, ಜಯಂತಿ ಕುಮರೇಶ್, ಪ್ರವೀಣ್... ಇವರೆಲ್ಲರೂ ನನಗೆ ಬಹಳ ಸಹಾಯ ಮಾಡಿದ್ದಾರೆ, ನನ್ನ ಮೇಲೆ ಪ್ರಭಾವ ಬೀರಿದ್ದಾರೆ.

◆ **ಘಟಂ ನುಡಿಸಾಣಿಕೆ ಶೈಲಿ, ಕ್ರಮದ ಬಗ್ಗೆ ವಿವರಿಸಿ...**

ಒಂದೊಂದು ವಾದ್ಯಕ್ಕೆ ಒಂದೊಂದು ತಂತ್ರ ಅಂತ ಇರುತ್ತದೆ. ಘಟಂ ನುಡಿಸಾಣಿಕೆ ಮೃದಂಗ ನುಡಿಸುವ ಹಾಗೆಯೇ, ನಾನೂ ಮೊದಲು ಮೃದಂಗದ ತಂತ್ರವನ್ನೇ ಘಟಂನಲ್ಲಿ ನುಡಿಸ್ತಿದ್ದೆ. ಅದಾದ ಮೇಲೆ ವಿನಾಯಕರಾಮ್ ಅವರ ಬಳಿ ಘಟಂನ ನಿಜವಾದ ಬೇರೆಯೇ ತಂತ್ರಗಾರಿಕೆ ಕಲಿತೆ. ಹತ್ತೂ ಬೆರಳುಗಳಲ್ಲಿ ನುಡಿಸುವ ವಾದ್ಯ ಇದೊಂದೇ, ಮುಷ್ಟಿ ಉಪಯೋಗಿಸುವುದು, ಹೊಟ್ಟೆಯಿಂದ ಘೂಂಕಾರ ತೆಗೆಯುವುದು... ಹೀಗೆ. ಅದಾದ ಮೇಲೆ ನಾನು ನನ್ನ ಅನುಭವದ ಮೇಲೆ ಈಗ ಘಟಂ ನುಡಿಸಾಣಿಕೆಗೆ ಹೊಸ ಆಯಾಮ ಕೊಟ್ಟಿದ್ದೀನಿ. ಬೇರೆ ಯಾವುದಾದರೂ ಆಫ್ರಿಕನ್ ರಿದಂ, ಲ್ಯಾಟಿನ್ ಮೆಲೊಡಿಯನ್ನು ತಗೊಂಡು ಘಟಂಗೆ ಅಳವಡಿಸಿ ನುಡಿಸುವ ಮೂಲಕ ಘಟಂ ನಾದಕ್ಕೆ ಹೆಚ್ಚಿನ ಮೆರುಗು ನೀಡುವ ಪ್ರಯತ್ನ ಮಾಡಿದ್ದೀನಿ.

◆ **ಕಛೇರಿಗಳಲ್ಲಿ ಘಟಂ ನುಡಿಸಿದಾಗ 'ಸಾರ್ಥಕತೆ' ಎನಿಸಿದ ಕ್ಷಣಗಳಿದ್ದರೆ ನೆನಪಿಸಿಕೊಳ್ಳುವಿರಾ?**

ಸಂಗೀತ ಕಛೇರಿಗಳಲ್ಲಿ ಘಟಂ ನುಡಿಸಿದಾಗ ಆಗುವ ಅನುಭವ ಅನನ್ಯ. ಅಲ್ಲಿ ಸಿಗುವ ಎನರ್ಜಿ ಎಷ್ಟು ಹಣ ಕೊಟ್ಟರೂ ಸಿಗದು. ಮೂರು ಗಂಟೆ ಬೆವರು ಸುರಿಸಿ ನುಡಿಸಿ ಮನೆಗೆ ಬಂದ್ರೆ, ಜೀವನದಲ್ಲಿ ಅಸಾಧ್ಯವಾದದ್ದು ಯಾವುದು ಇಲ್ಲ ಅನಿಸಿಬಿಡುತ್ತೆ. ಎಷ್ಟೋ ಸಮಾಧಾನ, ನೆಮ್ಮದಿ ಸಿಗುತ್ತದೆ. ನನ್ನ ಮೊದಲ ಪೂರ್ಣ ಪ್ರಮಾಣದ ಕಛೇರಿ ಮೈಸೂರು ಬ್ರದರ್ಸ್ ಜೊತೆ ನೀಡಿದಾಗ 'ಧನ್ಯನಾದೆ' ಎನಿಸಿತ್ತು. ಹಿರಿಯ ಕಲಾವಿದ ಉಮಯಾಳಪುರ ಶಿವರಾಮನ್ ಅವರ ಜೊತೆಗೆ 2006 ಜನವರಿ 14ರಂದು ನೀಡಿದ ಕಛೇರಿ, ಕಾರೈಕುಡಿ ಮಣಿ ಅವರ ಜೊತೆ ಸೆಪ್ಟೆಂಬರ್ 2, 2015ರಲ್ಲಿ ಘಟಂ ನುಡಿಸಿದ್ದು ನಿಜಕ್ಕೂ 'ಸಾರ್ಥಕ' ಅನ್ನಿಸಿದ ಕ್ಷಣಗಳು.

◆ **ವಿದೇಶಗಳಲ್ಲಿ ಘಟಂ ಅನ್ನು ಕೇಳುಗರು ಬೇರೆಲ್ಲ ಲಯವಾದ್ಯಗಳಿಗಿಂತಲೂ ಹೆಚ್ಚು ಆಸ್ವಾದಿಸುತ್ತಾರೆ. ಇದು ಹೇಗೆ, ಯಾವ ಕಾರಣಕ್ಕೆ?**

ಈಗ ವಿದೇಶಗಳಲ್ಲಿ ಘಟಂ ಎಷ್ಟು ಜನಪ್ರಿಯ ಆಗಿದೆ ಎಂದರೆ ಯೂರೋಪ್‌ಗೆ ಹೋದ್ರೆ ಈ ವಾದ್ಯದ ಹೆಸರೇನು ಎಂದು ಕೇಳಿದ ತಕ್ಷಣ 'ಘಟಂ' ಅಂತ ಹೇಳ್ತಾರೆ. ನನಗೆ ಅಚ್ಚರಿ ಆಗುತ್ತದೆ. ಬೆಂಗಳೂರಿನಲ್ಲಿ ಸಹ ಕೆಲವರಿಗೆ ಈ ವಾದ್ಯದ ಹೆಸರು ಕೇಳಿದರೆ 'ಮಡಕೆ' ಅಂತಾರೆ. ಇಲ್ಲಿಗಿಂತ ಯೂರೋಪ್‌ನಲ್ಲೇ ಜನರಿಗೆ ವಾದ್ಯದ ಪರಿಚಯ ಹೆಚ್ಚಾಗಿದೆ. ಸುಮಾರು 50ಕ್ಕೂ ಹೆಚ್ಚು ದೇಶ ಸುತ್ತಿದ್ದೇನೆ. ವಿಶ್ವದ ಮೂಲೆಮೂಲೆಗೆ ಹೋಗಿದ್ದೇನೆ. ಮಣ್ಣಿನ ವಾದ್ಯದ ನಾದ ಹೇಗೆ ಬರುತ್ತೆ ಅಂತ ಕೇಳೋದು ಜನರಿಗೆ ಅಚ್ಚರಿ. ವಾದ್ಯ ನುಡಿಸುವಾಗ ಅಷ್ಟೊಂದು ಖುಷಿ ಪಡ್ತಾರೆ, ಪೋಲೆಂಡ್, ಉಕ್ರೇನ್ ಮುಂತಾದ ದೇಶಗಳಲ್ಲಿಯೂ ಕಂಚಿನ ನಾದ ಕೊಡುವ ಘಟಂ ವಾದನವನ್ನು ಕೇಳುಗರು ಬಹಳ ಆಸಕ್ತಿಯಿಂದ ಆಸ್ವಾದಿಸುತ್ತಾರೆ.

◆ **ಘಟಂನಲ್ಲಿ ಫ್ಯೂಷನ್ ಸಂಗೀತವೂ ಆಪ್ಯಾಯಮಾನವೇ ಆಗಿದೆ. ಈ ಬಗ್ಗೆ ತಿಳಿಸಿ.**

ಘಟಂ ಎಲ್ಲ ಸಂಗೀತದ ಜೊತೆಗೆ, ವಾದ್ಯಗಳ ಜೊತೆಗೆ ಚೆನ್ನಾಗಿ ಬೆರೆಯುತ್ತದೆ. ಹೀಗಾಗಿ ವರ್ಲ್ಡ್ ಮ್ಯೂಸಿಕ್ ಜಾಸ್, ಪರ್ಕಷನ್, ಫ್ಯೂಷನ್, ಸಿಂಫೋನಿ ಆರ್ಕೆಸ್ಟ್ರಾ ಎಲ್ಲ ಕಡೆ ಘಟಂ ಮುಂಚೂಣಿಯಲ್ಲಿದೆ. ಇದರ ನಾದ ಎಲ್ಲರಿಗೂ ಖುಷಿ ಕೊಡುತ್ತಿದೆ. ಜಗತ್ತಿನಲ್ಲಿ ಎಲ್ಲರಿಗೂ ಈ ವಾದ್ಯದ ಪರಿಚಯ ಆಗಿರುವುದು ಇದರ ವಿಶಿಷ್ಟ ಕಂಪಿನ ಕಾರಣಕ್ಕಾಗಿ. ■